# ಹವ್ಯಾಸಿ ರಂಗಭೂಮಿ ಹುಟ್ಟು ಮತ್ತು ಬೆಳವಣಿಗೆ

**ಶಿವರಾಜ್ ಜಿ.**

ಸಂಶೋಧನಾ ವಿದ್ಯಾರ್ಥಿ, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು.

DOI: https://doi.org/10.5281/zenodo.18785931

## ABSTRACT:

ವೃತ್ತಿ ರಂಗಭೂಮಿ ನಾಟಕ ಲೋಕವನ್ನು ಅಕ್ಷರಶಃ ಒಂದು ಶತಮಾನಗಳ ಕಾಲ ಆಳಿತು. 'ಉತ್ತರ ಕರ್ನಾಟಕ ವೃತ್ತಿ ರಂಗಭೂಮಿಯ ತವರು' ಎಂದೆನಿಸಿದೆ. ತನ್ನದೇ ಆದ ವೈಭೋಗದಿಂದ ಸಿನಿಮಾ ನೋಡಿದ ಹಾಗೇ ಜನರನ್ನು ರಂಜಿಸುತ್ತಿತ್ತು. ಹೊಸತರಲ್ಲಿ ಹೊಸ ಹೊಸ ನಾಟಕಗಳಿಂದ ಗಟ್ಟಿಗೊಳ್ಳುತ್ತಾ ಹೋಯಿತು. ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ತನ್ನದೇ ಛಾಪನ್ನು ವಿಸ್ತಾರಗೊಳಿಸಿತು. ಹೀಗೆ ವೃತ್ತಿ ರಂಗಭೂಮಿ ವೇಗವಾಗಿ ಬೆಳೆಯುತ್ತಿದ್ದ ಸಂದರ್ಭದಲ್ಲಿ ಆರಂಭಗೊಂಡಿದ್ದೇ ಹವ್ಯಾಸಿ ರಂಗಭೂಮಿ. ಇಂಗ್ಲಿಷ್ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ಆಡಿದರು. ಗ್ರೀಕ್, ಮರಾಠಿ, ಪಾರ್ಸಿ... ಹೀಗೆ ಬಹಳ ದೊಡ್ಡ ಮಟ್ಟದಲ್ಲಿ ಅನುವಾದ ನಾಟಕ ಸಾಹಿತ್ಯ ಬೆಳೆಯಿತು.

## KEYWORDS:

ರಂಗಭೂಮಿ, ನಾಟಕ, ಹವ್ಯಾಸಿ ರಂಗಭೂಮಿ, ಭಾರತೀಯ ನಾಟಕ.

ಅಂದಿನ ಕಾಲದ ಭಾರತೀಯ ರಂಗಭೂಮಿಯಲ್ಲಿ ಪ್ರಾಮುಖ್ಯವಾಗಿ ಮರಾಠಿ, ಬಂಗಾಳಿ ಮತ್ತು ಮಲಯಾಳಂ ಭಾಷೆಯ ರಂಗಭೂಮಿಗಳು ಹೆಚ್ಚಿನ ಇತಿಹಾಸ ಹಾಗೂ ಹವ್ಯಾಸಿ ರಂಗಭೂಮಿಯ ಚರಿತ್ರೆಯನ್ನು ಹೊಂದಿದ್ದವು. ಕನ್ನಡ ರಂಗಭೂಮಿಯಲ್ಲಿ ಹವ್ಯಾಸಿ ರಂಗಭೂಮಿಯು ಭಾರತದ ಸ್ವಾತಂತ್ರ್ಯ ನಂತರ ಬೆಳವಣಿಗೆಯನ್ನು ಪಡೆಯಿತು. ಕನ್ನಡ ಹವ್ಯಾಸಿ ರಂಗಭೂಮಿಯ ಬೆಳವಣಿಗೆಯ ವಿವಿಧ ಸೋಪಾನಗಳನ್ನು ಅವಲೋಕಿಸಿದಾಗ 1930ರ ದಶಕದ ಹೊತ್ತಿಗೆ ಹವ್ಯಾಸಿ ರಂಗಭೂಮಿ ಕರ್ನಾಟಕದಲ್ಲಿ ಆರಂಭಗೊಳ್ಳುತ್ತಾ ಹೋಯಿತು. ನಂತರದಲ್ಲಿ ಕನ್ನಡದ ಹವ್ಯಾಸಿ ರಂಗಭೂಮಿಯ ವಿಕಾಸ 1965 ಹವ್ಯಾಸಿ ರಂಗಭೂಮಿಯ ಸುವರ್ಣಯುಗ ಎಂದರೆ ತಪ್ಪಾಗಲಾರದು. ಹೊತ್ತಿಗಾಗಲೇ ಸಿ. ಆರ್. ಸಿಂಹ, ಜಿ. ಶ್ರೀನಿವಾಸ್, ಆರ್ ನಾಗೇಶ್, ಮೊದಲಾದವರು ಹವ್ಯಾಸಿ ರಂಗಭೂಮಿಯಲ್ಲಿ ಕಾರ್ಯ ಪ್ರವೃತ್ತರಾಗಿದ್ದರು. ರಂಗಭೂಮಿ ಕಾಲಕಳೆಯಲು, ಮನರಂಜನೆಗೆಯೇ ಸೀಮಿತವಾಗಿದ್ದ ಸಮಯದ ಬಳಿಕ ಹೊಸ ತಲೆಮಾರಿನ ನಾಟಕಕಾರರು, ನಿರ್ದೇಶಕರು, ವೈಚಾರಿಕ ಪ್ರವೃತ್ತಿಯ ಸಾಹಿತ್ಯಕಾರರು ರಂಗಭೂಮಿಗೆ ಪ್ರವೇಶಿಸಿದ್ದರಿಂದ ಹವ್ಯಾಸಿ ರಂಗಭೂಮಿಗೆ ಹೊಸ ಮೆರುಗು ಬಂದಿತು.

'ಕಾವ್ಯೇಷು ನಾಟಕ ರಮ್ಯಂ' ಎಂಬುದು ಭರತ ಖಂಡದಲ್ಲಿ ಗಾದೆಯಂತಿರುವ ಒಂದು ಸೂಕ್ತಿ. ಈ ರಮ್ಯವಾದ ಸಾಹಿತ್ಯ ವಿಧಾನವು ಸಾಹಿತ್ಯಾಭ್ಯಾಸದ ಕೊನೆಯ

ಘಟ್ಟವೆಂದು ನಮ್ಮವರ ಹೇಳಿಕೆ. ಕಾಳಿದಾಸನು ಈ ಕಲಾಕೃತಿಯನ್ನು 'ಕಣ್ಣು ಕುಡಿದು ತೃಪ್ತಿಗೊಳ್ಳಬಲ್ಲ ಯಜ್ಞ' ಎಂದು ಹೇಳಿದ್ದಾನೆ. ಇತರ ಕಲೆಗಳಿಗಿಂತಲೂ ಹೆಚ್ಚಾಗಿ ಇದಕ್ಕೆ ಕಾರಣವನ್ನು ಕಂಡುಹಿಡಿಯುವುದು ಅಷ್ಟೇನು ಕಷ್ಟವಲ್ಲ. ನಾಟಕವೆಂಬುವುದು ಹಲವು ಕಲೆಗಳು ಸೇರಿ ಆದ ಒಂದು ಸಂಕೀರ್ಣ ಕಲೆ. ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ, ಅಭಿನಯ ಇತ್ಯಾದಿ... ಒಂದೊಂದು ಕಲೆಯೂ ಒಂದೊಂದು ದೃಷ್ಟಿಯಿಂದ ಅನ್ಯಾದೃಶವಾದುದು.

ನಾಟಕ ಒಂದು ಅಭಿನಯ ಕಲೆಯಾಗಿದೆ. ವಿಭಿನ್ನ ಪಾತ್ರಗಳ ಮೂಲಕ ಕಥೆಯೊಂದರ ಪ್ರದರ್ಶನವನ್ನು ಇಲ್ಲಿ ಮಾಡಲಾಗುತ್ತದೆ. ಈ ಪಾತ್ರಗಳನ್ನು ನಟರು ಅಭಿನಯಿಸಿ ತೋರಿಸುತ್ತಾರೆ. ನಾಟಕಕ್ಕೆ ಕಥೆಯೇ ಪ್ರಧಾನ, ಕಥಾ ಚಕ್ರಕ್ಕೆ ಚಾಲನೆ ನೀಡುವ ಪ್ರಮುಖ ಬಲಗಳೆಂದರೆ ಅದರ ಪಾತ್ರಗಳು, ಅವಕ್ಕೆ ಸಂಬಂಧಿಸಿದಂಥ ಘಟನೆಗಳು ಎನ್ನಬಹುದು.

ವೃತ್ತಿ ರಂಗಭೂಮಿಗೆ ದಕ್ಷಿಣ ಕರ್ನಾಟಕದಲ್ಲಿ ಮೈಸೂರಿನ ಮಹಾರಾಜರು ರಾಜಾಶ್ರಯ ನೀಡಿದರು. ದಿನ ಕಳೆದಂತೆ ಉತ್ತರ ಕರ್ನಾಟಕದಲ್ಲಿ ವೃತ್ತಿ ರಂಗ ಕಂಪನಿಗಳು ಆರಂಭವಾದವು. ಕಂಪನಿ ನಾಟಕಗಳ ಮುಖೇನ ವೃತ್ತಿ ರಂಗಭೂಮಿ ಬಹಳಷ್ಟು ಎತ್ತರಕ್ಕೆ ಹೋಯಿತು. ಈ ನಾಟಕ ಕಂಪನಿಗಳಲ್ಲಿ ನಾಟಕದ ಜೊತೆಗೆ ನವನವೀನ ಪ್ರಯೋಗ ಶುರುವಾದವು. ಜೊತೆಗೆ ಹೊಸ ಹೊಸ ನಾಟಕಕಾರರು ನಾಟಕಗಳನ್ನು ಬರೆದರು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಂಗಭೂಮಿಗೆ ಒಂದು ರಂಗ ಚರಿತ್ರೆ ಇದೆ. ಇದನ್ನು ಸಾಹಿತ್ಯಿಕ ಹಾಗೂ ಸಾಮಾಜಿಕ ವಿನ್ಯಾಸದ ದೃಷ್ಟಿಯಿಂದ ಕಾಣಬೇಕಿದೆ. ವೃತ್ತಿ ರಂಗಭೂಮಿ ಗಟ್ಟಿಯಾಗಿ ಬೇರೂರಿದ ಸಂದರ್ಭವೆಂದರೆ 90ರ ದಶಕದಲ್ಲಿ. ನಂತರ ನಿಧಾನವಾಗಿ ತಲೆ ಎತ್ತಿದ್ದೇ ಹವ್ಯಾಸಿ ರಂಗಭೂಮಿ. ವೃತ್ತಿ ರಂಗಭೂಮಿ ನಾಟಕ ಲೋಕವನ್ನು ಅಕ್ಷರಶಃ ಒಂದು ಶತಮಾನ ಕಾಲ ಆಳಿತು. ಉತ್ತರ ಕರ್ನಾಟಕ ವೃತ್ತಿ ರಂಗಭೂಮಿಯ ತವರು ಎಂದೆನಿಸಿತು. ತನ್ನದೇ ವೈಭೋಗದಿಂದ ಸಿನಿಮಾ ನೋಡಿದ ಹಾಗೆ ಜನರನ್ನು ರಂಜಿಸುತ್ತಿತ್ತು. ಹೊಸತರಲ್ಲಿ ಹೊಸ ಹೊಸ ನಾಟಕಗಳಿಂದ ಗಟ್ಟಿಗೊಳ್ಳುತ್ತಾ ಹೋಯಿತು. ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ತನ್ನದೇ ಛಾಪನ್ನು ವಿಸ್ತಾರಗೊಳಿಸಿತು. ಹೀಗೆ ವೃತ್ತಿ ರಂಗಭೂಮಿ ವೇಗವಾಗಿ ಬೆಳೆಯುತ್ತಿದ್ದ ಸಂದರ್ಭದಲ್ಲಿ ಆರಂಭಗೊಂಡಿದ್ದೇ ಹವ್ಯಾಸಿ ರಂಗಭೂಮಿ. ಇಂಗ್ಲಿಷ್ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿ ಆಡಿದರು. ಗ್ರೀಕ್, ಮರಾಠಿ, ಪಾರ್ಸಿ... ಹೀಗೆ ಬಹಳ ದೊಡ್ಡ ಮಟ್ಟದಲ್ಲಿ ಅನುವಾದ ನಾಟಕ ಸಾಹಿತ್ಯ ಬೆಳೆಯಿತು.

ವೃತ್ತಿ ರಂಗಭೂಮಿಯಿಂದ ಬದಲಾದ ರೂಪವೇ ಹವ್ಯಾಸಿ ರಂಗಭೂಮಿ. ಹವ್ಯಾಸಿ ರಂಗಭೂಮಿ ಅತಿ ವೇಗವಾಗಿ ಜನರಲ್ಲಿ ಮನೆಮಾಡಿತು. ಶಾಲಾ ಕಾಲೇಜು ವಿದ್ಯಾರ್ಥಿಗಳು, ಹಲವಾರು ಕಾರ್ಯಕ್ರಮದಲ್ಲಿ, ಕಾರ್ಮಿಕರು ಕಾರ್ಖಾನೆಗಳ ವಾರ್ಷಿಕೋತ್ಸವ ಸಂದರ್ಭಗಳಲ್ಲಿ ಮನರಂಜನೆಗಾಗಿ ನಾಟಕ ಶುರು ಮಾಡಿದರು.

ಹವ್ಯಾಸಿ ರಂಗಭೂಮಿ ಬೇರೆ ಬೇರೆ ಕ್ಷೇತ್ರದ ಜನರನ್ನು ಆಕರ್ಷಿಸಿತು. ಇದು ಉರುಳಿದಂತೆ ನಿರ್ದೇಶಕರಿಗೆ ಹೆಚ್ಚು ಮನ್ನಣೆ ದೊರೆಯಿತು. ಈ ರೀತಿಯಾಗಿ ಹವ್ಯಾಸಿ ರಂಗಭೂಮಿಯು ಬೇರೆ ಸ್ವರೂಪ ಪಡೆದುಕೊಂಡದ್ದನ್ನು ಗಮನಿಸಬಹುದು. 1905ರಲ್ಲಿ ಧಾರವಾಡದಲ್ಲಿ 'ಮುದವೀಡು ಕೃಷ್ಣರಾಯ'ರಿಂದ 'ಭರತ ಕಲೋತ್ತೇಜಕ ಸಂಗೀತ ಸಮಾಜ' ಎಂಬ ಹವ್ಯಾಸಿ ರಂಗತಂಡ ಆರಂಭಗೊಂಡಿತು. ಈ ಸಂಸ್ಥೆ ಹವ್ಯಾಸಿ ರಂಗ ಚರಿತ್ರೆಯಲ್ಲಿಯೇ ದೊಡ್ಡ ಬೆಳವಣಿಗೆ. ಇದು ಪ್ರಯೋಗ ಮಾಡಿದಂತಹ ಮೊದಲ ನಾಟಕ 'ಚುರುಮುರಿ ಶೇಷಗಿರಿ ರಾಯರು' ರಚಿಸಿದ 'ಶಾಕುಂತಲಾ' ನಾಟಕ. ಹವ್ಯಾಸಿ ನಾಟಕಗಳಲ್ಲಿ ಆ ನಾಟಕ ಮಾಡಬಾರದು ಅಥವಾ ಇದೇ ನಾಟಕ ಮಾಡಬೇಕು ಅನ್ನುವಂತಹ ಕಟ್ಟುಪಾಡುಗಳಿಲ್ಲ.

'ಅಮೇಚೂರ್ ಡ್ರಮೇಟಿಕ್ ಅಸೋಸಿಯೇಷನ್ ಹವ್ಯಾಸಿ ರಂಗತಂಡ'ವನ್ನು 'ಬಳ್ಳಾರಿಯ ರಾಘವಾಚಾರ್ಯರು' 1909ರಲ್ಲಿ ಬೆಂಗಳೂರಿನಲ್ಲಿ ಆರಂಭಿಸುವುದರ ಜತೆಗೆ ತಮ್ಮ ಅಮೋಘ ಅಭಿನಯದಿಂದ ಜನಮನ ಗೆದ್ದರು. ರಾಘವಾಚಾರ್ಯರು ರಂಗ ವೇದಿಕೆಗೆ ಬರುವರು ಎಂದರೆ ಸಾವಿರಾರು ಜನ ಕಾದು ಕುಳಿತಿರುತ್ತಿದ್ದರು. ಅವರು ಕನ್ನಡ ನಾಟಕಗಳಲ್ಲಿ ಅಭಿನಯ ಮಾಡಿದವರಲ್ಲ, ತೆಲುಗು ನಾಟಕಗಳಲ್ಲೂ ಅಭಿನಯಿಸಿ ಸೈ ಎನಿಸಿಕೊಂಡವರು. ಸಂಸ್ಕೃತ, ಮಲಯಾಳಂ ಭಾಷೆಯಲ್ಲಿ ಪಾರಂಗತರಾಗಿದ್ದರು. ಪ್ರಸಿದ್ಧರಾದಂತಹ ಭೀಮರಾವ್, ಪೃಥ್ವಿರಾಜ್, ವಾಸುದೇವಾಚಾರ್ಯ, ಮುದ್ದುಕೃಷ್ಣ ಇನ್ನಿತರ ಪ್ರಮುಖ ನಟ ನಟಿಯರೊಂದಿಗೆ ಈ ಸಂಸ್ಥೆ ತುಂಬಿತ್ತು. ಅಮೇಚೂರ್ ಡ್ರಮೇಟಿಕ್ ಅಸೋಸಿಯೇಷನ್ ಸಂಸ್ಥೆ ಕೇವಲ ನಾಟಕ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಿರದೆ, ನಾಟಕ ರಚನಾ ಸ್ಪರ್ಧೆ, ಪ್ರದರ್ಶನ ಸ್ಪರ್ಧೆ ಏರ್ಪಡಿಸಿ, ಉತ್ತಮ ನಾಟಕ ರಚನಾಕಾರರಿಗೆ, ಉತ್ತಮ ಕಲಾವಿದರಿಗೆ ಪ್ರಶಸ್ತಿಯನ್ನೂ ಸಹ ನೀಡುತ್ತಿತ್ತು. ಈ ಹವ್ಯಾಸಿ ರಂಗ ಸಂಸ್ಥೆಯ ಮತ್ತೊಂದು ವಿಶೇಷ ಏನೆಂದರೆ ನಾಡಿನ ಪ್ರಖ್ಯಾತ ಸಾಹಿತಿಗಳು, ರಂಗಕರ್ಮಿಗಳಾದ ಅನಕೃ, ಪಂಡಿತ್ ತಾರನಾಥ್, ಬೆಳ್ಳಾವೆ ನರಸಿಂಹಶಾಸ್ತ್ರಿ, ಸಂಪತ್ ಗಿರಿ ರಾಯರು, ಪದ್ಮಾವತಿ, ವೆಂಕಟರಾಮಯ್ಯನವರು, ವಿಮರ್ಶಕರು, ಕಲಾವಿದರು, ಸಂಗೀತಗಾರರು, ರಂಗಕರ್ಮಿಗಳು ಈ ಸಂಸ್ಥೆಯಲ್ಲಿದ್ದರು. ಈ ಸಂಸ್ಥೆ ವೃತ್ತಿ ರಂಗಭೂಮಿಗಿಂತ ಬಹಳ ಭಿನ್ನವಾದುದು.

ಕುವೆಂಪು ಅವರು 'ಶೂದ್ರ ತಪಸ್ವಿ', 'ಜಲಗಾರ', 'ಬೊಮ್ಮನಹಳ್ಳಿಯ ಕಿಂದರಿಜೋಗಿ' ನಾಟಕಗಳನ್ನು ನವೋದಯದ ಸಂದರ್ಭದಲ್ಲಿ ರಚಿಸಿದ್ದರು. ಈ ಡ್ರಮೇಟಿಕ್ ಸಂಸ್ಥೆ ಈ ತರಹ ವಿಭಿನ್ನ ನಾಟಕಗಳನ್ನು ಪ್ರದರ್ಶಿಸಿ ಜನಪ್ರಿಯತೆ ಗಳಿಸಿತು. ಇದರ ಜೊತೆಯಲ್ಲಿ ಮಾಸ್ತಿಯವರ ಕಾಕನಕೋಟೆಯನ್ನೂ ಸಹ ಅದ್ಭುತವಾಗಿ ಪ್ರದರ್ಶಿಸಿದರು. ಅನಕೃ ಅವರ ಹಲವಾರು ಕಾದಂಬರಿಗಳನ್ನು ನಾಟಕಕ್ಕೆ ಅನುವಾದಿಸಿ ಅಭಿನಯಿಸಿದರು. ಪಿ. ಎಸ್. ವೆಂಕಟರಾವ್ ಎಂಬುವರ ಛಾಯಾ ಕಲಾವಿದರು ಎನ್ನುವ ಸಂಸ್ಥೆ, ಸಿ. ಕೆ. ನಾಗರಾಜ್ ರಾವ್ ಅವರ ಯುನೈಟೆಡ್ ಆರ್ಟಿಸ್ಟ್ಸ್ ಸಂಸ್ಥೆ, ಜಿ. ಶಿವಾನಂದ ಅವರ ಕಲಾಕುಂಜ, ಬಳಿಕ ಶ್ರೀನಿವಾಸ ಮತ್ತು

ಗೆಳೆಯರ ತಂಡ ಸೇರಿ ನಟರಂಗ ಮತ್ತು ಸಮುದಾಯ ಹವ್ಯಾಸಿ ಸಂಸ್ಥೆ ಕಟ್ಟಿದರು. 1990ರಲ್ಲಿ ಕನ್ನಡದ ಹವ್ಯಾಸಿ ರಂಗಭೂಮಿಯ ಸುವರ್ಣಯುಗವೆಂದು ಕರೆಯಬಹುದಾದಂತಹ ಸಮಯ.

ಈ ರೀತಿಯಾಗಿ ದಕ್ಷಿಣ ಭಾಗದಲ್ಲಿ ಹವ್ಯಾಸಿ ರಂಗಸಂಸ್ಥೆಗಳು ಜನಿಸಿ ಜನರನ್ನು ರಂಜಿಸಿದವು. ಈ ಮೇಲಿನ ಎಲ್ಲವೂ ಹವ್ಯಾಸಿ ರಂಗಭೂಮಿಗಳು 90ರ ದಶಕದಲ್ಲಿ ಸ್ವಾತಂತ್ರ್ಯ ಪೂರ್ವದ ಕಾಲಾವಧಿಯಲ್ಲಿ ಆರಂಭಗೊಂಡಂತವು. ವೃತ್ತಿ ರಂಗಭೂಮಿ ತರುವಾಯ ಸಾಹಿತ್ಯದ ಕ್ರಾಂತಿಕಾರಕ ಬದಲಾವಣೆಯ ಕಾರಣಕ್ಕಾಗಿ ಹೊಸ ಪ್ರಯೋಗ, ಹೊಸ ವಿನ್ಯಾಸ, ಹೊಸ ವೈಚಾರಿಕ ಆಯಾಮಗಳ ಮೂಲಕ ಜನರಿಗೆ ಸಂವಹನ ಮಾಡಲಿಕ್ಕೆ ಅದರದೇ ಭಾಷೆಯಲ್ಲಿ ಹವ್ಯಾಸಿ ರಂಗಭೂಮಿ ನಿರತಗೊಂಡಿತು. ಪ್ರಸ್ತುತ ದಿನಗಳಲ್ಲಿ ಜಾತ್ರೆ, ಊರ ಹಬ್ಬ ಸಂದರ್ಭಗಳಲ್ಲಿ ಆಸಕ್ತರು ತಮ್ಮದೇ ಹವ್ಯಾಸಿ ತಂಡಗಳನ್ನು ಕಟ್ಟಿಕೊಂಡು ತಾವುಗಳೇ ಹಣವನ್ನು ಕ್ರೋಢೀಕರಿಸಿ ನಾಟಕಗಳನ್ನು ಆಡುವುದು ವಾಡಿಕೆ.

**ಉಪಸಂಹಾರ:**

ಪಾಶ್ಚಾತ್ಯರು ಅಥವಾ ಪಾಶ್ಚಾತ್ಯರ ಭಾವನೆಗಳಿಂದ ಪ್ರಚೋದಿತರಾದವರು ಭಾರತೀಯ ನಾಟಕ ಸಾಹಿತ್ಯದ ಮೇಲೆ ಕೆಲವು ಆರೋಪಗಳನ್ನು ಹೊರಿಸಿ ಅವುಗಳನ್ನು ತೆಗಳುವುದು ರೂಢಿಯಾಗಿದೆ. ಅವುಗಳನ್ನು ವಿಮರ್ಶಕರು ಒರೆಗಲ್ಲ ಮೇಲೆ ಉಜ್ಜಿ ಸತ್ಯಾಸತ್ಯತೆಯ ಬಣ್ಣವನ್ನು ನಿರ್ಧರಿಸಬೇಕಾದುದು ಅಗತ್ಯ. ಅದರೊಡನೆ ನಮ್ಮ ನಾಟಕ ಕಲೆಯಲ್ಲಿ ಕಾಣಬರುವ ಕೆಲವು ಮಹದ್ವಿಶೇಷಗಳನ್ನೂ ಸ್ಥೂಲವಾಗಿ ವಿಚಾರ ಮಾಡಲು ಈಗ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ.

ಭಾರತೀಯ ನಾಟಕಗಳ ಮೇಲೆ ಇರುವ ಎರಡನೇಯ ಪ್ರಬಲ ಆಪಾದನೆಯೆಂದರೆ ಅವುಗಳೆಲ್ಲವೂ ಅವಾಸ್ತವಿಕತೆಯ ಮುದ್ದೆಗಳು ಎಂಬುದು. ಶ್ರೀಮಾನ್ ಕುವೆಂಪುರವರು ತಮ್ಮ 'ಪ್ರತಿಮಾ ಮತ್ತು ಪ್ರಕೃತಿ' ಎಂಬ ಲೇಖನದಲ್ಲಿಯೂ, ಈ ವಾದವನ್ನು ಹೂಡುವವರ ಬಾಯಿಯನ್ನು ಮುಚ್ಚಿದ್ದಾರೆ. ನಮ್ಮ ಸಾಂಪ್ರದಾಯಿಕ ದೃಷ್ಟಿಯಲ್ಲಿ 'ವಾಸ್ತವಿಕತೆ'ಯ ವಾದಕ್ಕೆ ಹೆಚ್ಚು ಮಹತ್ವವಿಲ್ಲ. ಔಚಿತ್ಯವೂ ನಾಟಕದ ಮುಖ್ಯ ನಿಯಮವೇ ಹೊರತು ನೀರಸ ವಾಸ್ತವಿಕತೆಯಲ್ಲ. ಲೋಕದ ನೀರಸ ವಸ್ತುಗಳು ಸರಸವಾಗಬೇಕಾದರೆ ಸ್ವಲ್ಪ ಹೆಚ್ಚೋ ಕಡಿಮೆಯೋ ಅವಾಸ್ತವಿಕತೆಯ ಛಾಯೆಯನ್ನು ಪಡೆಯಲೇಬೇಕು.

**ಆಕರ ಗ್ರಂಥ:**

1. ಶಾಮರಾಯ ತ.ಸು., (1968) ಕನ್ನಡ ನಾಟಕ, ಮೈಸೂರು: ಪ್ರತಿಭಾ ಪ್ರಕಾಶನ.